

بسم اللهِ الرّحمٰنِ الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **24-12-2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ ـ بِسْمِ اللهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ اِيَّاكَ نَعْبُدُ وَاِيَّاكَ نَسْتَعِيْنُ

اِهْدِنَا الصِّرَاطَ الْمُسْتَقِيْمَ ـ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಪೈಗಂಬರ್(ಸ)ರ ಹಿಜ್ರತ್‌ನಲ್ಲಿ ಹಝ್ರತ್ ಅಬೂಬಕರ್(ರ) ಜೊತೆಗಿದ್ದ ಬಗ್ಗೆಯೂ ಪ್ರಸ್ತಾಪವಿದೆ. ಮಕ್ಕದಲ್ಲಿ ನೆಲೆಸಿದ್ದ ಮುಸ್ಲಿಮರ ಮೇಲೆ ಮಕ್ಕಾ ನಿಷೇಧಿಗಳ ದೌರ್ಜನ್ಯ ಮತ್ತು ಪೀಡನೆ ನಿರಂತರವಾಗಿ ವರ್ಧಿಸಿದ ಅದೇ ವೇಳೆ ಹಝ್ರತ್ ಪೈಗಂಬರ್(ಸ)ರಿಗೆ ಒಂದು ಕನಸಿನಲ್ಲಿ ಖರ್ಜೂರದ ಮರಗಳಿಂದ ಸುತ್ತುವರೆದ ಲವಣಯುಕ್ತ ಪ್ರದೇಶವನ್ನು ಹಿಜ್ರತ್‌ಗಾಗಿ ತೋರಿಸಲಾಯಿತು. ಈ ಭೂಪ್ರದೇಶ ಮತ್ತು ಅದರ ನಕಾಶೆಯನ್ನು ನೋಡಿಕೊಂಡು, ಅದು ಯಮಾಮ ಅಥವಾ ಹಿಜರ್ ಆಗಿರಬಹುದೆಂದು ಹಝ್ರತ್ ಪೈಗಂಬರ್(ಸ) ಭಾವಿಸಿದರು. ಕೆಲವು ಕಾಲದ ನಂತರ ಮದೀನದ ಸೌಭಾಗ್ಯಶಾಲಿಗಳಾದ ಅನ್ಸಾರ್‌ಗಳು ಇಸ್ಲಾಂ ಸ್ವೀಕರಿಸಲು ಶುರುಮಾಡಿದಾಗ ಕನಸಿನಲ್ಲಿ ಕಂಡದ್ದು ಯಸ್‌ರಿಬ್ ಆಗಿತ್ತು ಎಂದು ಅಲ್ಲಾಹನು ಹಝ್ರತ್ ಪೈಗಂಬರ್(ಸ)ರಿಗೆ ದಿವ್ಯವಾಣಿ ಮೂಲಕ ತಿಳಿಸಿಕೊಟ್ಟನು. ಆ ಪ್ರದೇಶ ನಂತರ ಕಾಲದಲ್ಲಿ ಮದೀನ ಎಂಬ ಹೆಸರಲ್ಲಿ ಪ್ರಸಿದ್ಧವಾಗಲಿಕ್ಕಿತ್ತು.

ಹಝ್ರತ್ ಪೈಗಂಬರ್(ಸ)ರ ಅನುಮತಿಯ ಮೇರೆಗೆ ಮಕ್ಕದ ಮುಸ್ಲಿಮರು ಮದೀನದ ಕಡೆಗೆ ಹಿಜ್ರತ್ ಮಾಡಲು ಶುರುಮಾಡಿದರು. ಅಖಬದಲ್ಲಿ ನಡೆದ ಎರಡನೇ ಬೈಅತ್ತಿನ ನಂತರ ಅದು ಇನ್ನೂ ಹೆಚ್ಚಾಯಿತು. ಮಕ್ಕದ ದುಷ್ಟ ಸರದಾರರು ಕೋಪದಿಂದ ಕೆಂಡವಾಗಿ ಮುಸ್ಲಿಮರ ಮೇಲೆ ದೌರ್ಜನ್ಯ ಮತ್ತು ಪೀಡನೆಯ ಹೊಸ ಹೊಸ ಮಾರ್ಗಗಳನ್ನು ಅವಲಂಬಿಸುತ್ತಿದ್ದರು. ಆದರೆ ಸಹನೆ ಮತ್ತು ಕೃತಜ್ಞತೆ ಅರ್ಪಿಸುವ ಸತ್ಯವಿಶ್ವಾಸಿಗಳ ಸಂಘದಲ್ಲಿ ಹಿಜ್ರತ್ ಮಾಡಲು ಸಾಧ್ಯವಿರುವವರು ಮದೀನದ ಕಡೆಗೆ ಹಿಜ್ರತ್ ಮಾಡುತ್ತಲೇ ಇದ್ದರು. ಆದರೆ ಹಝ್ರತ್ ಪೈಗಂಬರ್(ಸ) ಅಲ್ಲಾಹನ ಆದೇಶಕ್ಕೆ ಕಾಯುತ್ತಿದ್ದರು. ಹಝ್ರತ್ ಅಬೂಬಕರ್(ರ) ಹಿಜ್ರತ್ ಮಾಡಲು ಅನುಮತಿ ಕೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: **ಅಲಾ ರಿಸ್‌ಲಿಕ ಫಇನ್ನೀ ಅರ್‌ಜೂ ಅನ್‌ಯುಅ್‌ಧನ ಲೀ**. ಎಂದರೆ ಸ್ವಲ್ಪ ಸಮಯ ಕಾಯಿರಿ. ಏಕೆಂದರೆ ನನಗೂ ಅನುಮತಿ ಲಭಿಸುವುದು ಎಂಬ ಪ್ರತೀಕ್ಷೆ ನನಗೂ ಇದೆ. ಕೊನೆಗೆ ಮಕ್ಕದಲ್ಲಿ ಹಝ್ರತ್ ಪೈಗಂಬರ್(ಸ), ಹಝ್ರತ್ ಅಬೂಬಕರ್(ರ), ಹಝ್ರತ್ ಅಲಿ(ರ) ಮತ್ತು ಕೆಲವು ಗುಲಾಮರು ಮಾತ್ರ ಉಳಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹಿಜ್ರತ್ ಮಾಡಿ ಮದೀನಕ್ಕೆ ಹೋಗುವರೋ ಎಂಬ ಶಂಕೆ ಮಕ್ಕಾದ ಸತ್ಯನಿಷೇಧಿಗಳಿಗೆ ಉಂಟಾದಾಗ ಅವರು ಹಝ್ರತ್ ಪೈಗಂಬರ್(ಸ)ರ ವಿರುದ್ಧ ರಹಸ್ಯವಾದ ಸಮಾಲೋಚನೆ ನಡೆಸಲಿಕ್ಕಾಗಿ ಖುಸ್ಸಿ ಬಿನ್ ಕಿಲಾಬಿನ ಮನೆಯಾದ ದಾರುನ್ನದ್‌ವದಲ್ಲಿ ಒಟ್ಟುಗೂಡಿದರು. ಈ ದಿನವನ್ನು **ಯೌಮುಝ್ಝುಹ್‌ಮ** ಎಂದು ಕರೆಯಲಾಗುತ್ತದೆ. ಈ ಸಮಾಲೋಚನೆಯಲ್ಲಿ ಖುರೈಶಿನ ಪ್ರಸಿದ್ಧ ಸರದಾರರ ಒಂದು ದೊಡ್ಡ ಸಂಘವಲ್ಲದೆ ಖುರೈಶಿಗಳಲ್ಲದ ಕೆಲವು ಸರದಾರರು ಕೂಡ ಇದ್ದರು. ಹಝ್ರತ್ ಪೈಗಂಬರ್(ಸ)ರ ವಿರುದ್ಧ ಅನೇಕ ಸಲಹೆಗಳ ಬಗ್ಗೆ ಚರ್ಚಿಸಲಾಯಿತು. ಉದಾಹರಣೆಗೆ ಅವರನ್ನು ಒಂದೇ ಸ್ಥಳಕ್ಕೆ ಪರಿಮಿತಗೊಳಿಸಬೇಕು ಅಥವಾ ಅವರನ್ನು ಗಡಿಪಾರು ಮಾಡಬೇಕು ಎಂಬ ರೀತಿಯ ಸಲಹೆಗಳು ಬಂದಿದ್ದುವು. ಆದರೆ ಖುರೈಶಿನ ಪ್ರತಿ ಗೋತ್ರದಿಂದ ಆದರಣೀಯ ಕುಲಕ್ಕೆ ಸೇರಿದ ಶಕ್ತಿಶಾಲಿ ಯುವಕರನ್ನು ಆಯ್ಕೆ ಮಾಡಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕೊಲ್ಲಬೇಕೆಂಬ ಸಲಹೆಯನ್ನು ಅಬೂಜಹಲ್ ನೀಡಿದನು. ಈ ರೀತಿಯಿಂದ ಹಝ್ರತ್ ಪೈಗಂಬರ್(ಸ)ರ ಕೊಲೆಯು ಎಲ್ಲ ಗೋತ್ರಗಳು ಸೇರಿ ಮಾಡಿದಂತಾಗುವುದು ಹಾಗೂ ಬನೂ ಅಬ್ದು ಮನಾಫ್ ಗೋತ್ರವು ಎಲ್ಲ ಗೋತ್ರಗಳ ವಿರುದ್ಧ ಯುದ್ಧ ಮಾಡಲಾರರು ಹಾಗೂ ಪರಿಹಾರ ಧನ ಕೊಟ್ಟು ತೃಪ್ತಪಡಿಸಬಹುದಾಗಿದೆ ಎಂದು ಹೇಳಿದನು. ಆಗ ಚಾದರವನ್ನು ಹೊದ್ದು ಕೊಂಡಿದ್ದ, ಇಬ್ಲೀಸ್ ಗುಣವುಳ್ಳ, ಓರ್ವ ಅಪರಿಚಿತನಾದ ಹಿರಿ ವಯಸ್ಸಿನ ವೃದ್ಧ ವ್ಯಕ್ತಿ ಹೀಗೆ ಹೇಳಿದನು: ನಾನು ನಜದಿನ ನಿವಾಸಿಯಾಗಿರುವೆನು ಮತ್ತು ನಿಮ್ಮ ಒಳಿತಿಗಾಗಿ ನಾನು ಬಂದಿದ್ದೇನೆ. ಅವನು ಅಬೂಜಹಲಿನ ಅಭಿಪ್ರಾಯವನ್ನು ಪೂರ್ಣವಾಗಿ ಬೆಂಬಲಿಸಿದನು. ಆಗ ಅದನ್ನು ಎಲ್ಲರು ಒಪ್ಪಿದರು. ಮತ್ತೊಂದೆಡೆ ಹಝ್ರತ್ ಪೈಗಂಬರ್(ಸ)ರಿಗೆ ಈ ಎಲ್ಲ ಸ್ಥಿತಿಗತಿಗಳನ್ನು ತಿಳಿಸುತ್ತಾ ಹಿಜ್ರತ್ ಮಾಡುವ ಅನುಮತಿಯನ್ನು ಅಲ್ಲಾಹನು ಜಿಬ್ರೀಲ್ ಮೂಲಕ ಕೊಟ್ಟನು. ಅದರೊಂದಿಗೆ ವಿಜಯಶಾಲಿಯಾಗಿ ಮಕ್ಕಾ ಪಟ್ಟಣಕ್ಕೆ ಮರಳಿ ಬರುವುದಾಗಿ ಸುವಾರ್ತೆಯನ್ನು ಸಹ ನೀಡಿದನು. ಹಿಜ್ರತ್‌ಗೆ ಅನುಮತಿ ಲಭಿಸಿದ ನಂತರ ಹಝ್ರತ್ ಪೈಗಂಬರ್(ಸ) ಕಠಿಣವಾದ ಬೇಸಿಗೆಗಾಲದ ಒಂದು ಮಧ್ಯಾಹ್ನದ ಸಮಯದಲ್ಲಿ ಯಾರಿಗೂ ಗೊತ್ತಾಗದಂತಾಗಲು ಸಂಪೂರ್ಣವಾದ ಮುಂಜಾಗ್ರತೆಯೊಂದಿಗೆ ಚಾದರವನ್ನು ಹೊದ್ದುಕೊಂಡು ಹಝ್ರತ್ ಅಬೂಬಕರ್(ರ)ರ ಮನೆಗೆ ಹೋದರು. ಹಝ್ರತ್ ಅಬೂಬಕರ್(ರ)ರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು: ನನಗೆ ಹಿಜ್ರತ್ ಮಾಡುವ ಅನುಮತಿ ಅಲ್ಲಾಹನ ಕಡೆಯಿಂದ ಲಭಿಸಿದೆ. ಹಝ್ರತ್ ಅಬೂಬಕರ್(ರ) ಹೇಳಿದರು: ಯಾ ರಸೂಲಲ್ಲಾಹ್, ನನ್ನನ್ನು ಕೂಡ ನಿಮ್ಮ ಜೊತೆಗೆ ಕೊಂಡುಹೋಗುವಿರಾ? ಹೌದೆಂದು ಹಝ್ರತ್ ಪೈಗಂಬರ್(ಸ)

ಹೇಳಿದರು. ಹಿಜ್ರತ್ ಯಾತ್ರೆಯ ಕುರಿತು ಮೊದಲಿನಿಂದಲೇ ಸೂಚನೆ ಲಭಿಸಿದ ಕಾರಣದಿಂದ ಹಝ್ರತ್ ಅಬೂಬಕರ್(ರ) ತನ್ನ ತೀಕ್ಷ್ಣಗ್ರಹಿಕೆಯಿಂದ ಎರಡು ಒಂಟೆಗಳನ್ನು ಮೊದಲೇ 800 ದಿರ್ಹಮ್‌ನಲ್ಲಿ ಖರೀದಿ ಮಾಡಿ ತಯಾರು ಮಾಡಿದ್ದರು. ಹಝ್ರತ್ ಅಬೂಬಕರ್(ರ)ರಿಂದ ಹಝ್ರತ್ ಪೈಗಂಬರ್(ಸ) ಒಂದು ಒಂಟೆಯನ್ನು 400 ದಿರ್ಹಂ ನೀಡಿ ಪಡೆದುಕೊಂಡರು. ಮತ್ತೊಂದು ವರದಿ ಪ್ರಕಾರ 800 ದಿರ್ಹಂ ಕೊಟ್ಟು ಖರೀದಿ ಮಾಡಿದರು.

ಯೋಜನೆಯ ಪ್ರಕಾರ ಮೊದಲು ಸೌರ್ ಗುಹೆಗೆ ತಲುಪುವುದಾಗಿಯೂ ಅಲ್ಲಿ ಮೂರು ದಿನಗಳು ತಂಗುವುದಾಗಿಯೂ ತೀರ್ಮಾನಿಸಲಾಯಿತು. ಮಕ್ಕದ ಸುತ್ತ ಇರುವ ಮರುಭೂಮಿಯ ಎಲ್ಲ ರಸ್ತೆಗಳ ಬಗ್ಗೆ ಗೊತ್ತಿದ್ದ ಒಬ್ಬ ಮುಶ್ರಿಕ್ ಆದರೆ ಸಭ್ಯ ವ್ಯಕ್ತಿಯಾದ ಅಬ್ದುಲ್ಲಾಹ್ ಬಿನ್ ಅರೀಖತ್‌ನಿಗೆ ಮೂರು ಒಂಟೆಗಳನ್ನು ಒಪ್ಪಿಸಲಾಯಿತು ಮತ್ತು ಮೂರು ದಿನಗಳ ನಂತರ ಮುಂಜಾನೆ ಸೌರ್ ಗುಹೆಯ ಬಳಿ ಬರಬೇಕೆಂದು ಹೇಳಲಾಯಿತು. ಆ ವ್ಯಕ್ತಿ ಅನಂತರ ಮುಸ್ಲಿಮನಾದನು. ದಿನಾಲೂ ಮಕ್ಕದ ಸ್ಥಿತಿಗತಿಗಳ ಬಗ್ಗೆ ರಾತ್ರಿ ಸಮಯದಲ್ಲಿ ಸೌರ್ ಗುಹೆಗೆ ಬಂದು ತಿಳಿಸಿಕೊಡುವ ಕೆಲಸ ಅಬ್ದುಲ್ಲಾಹ್ ಬಿನ್ ಅಬೂಬಕರ್‌ರಿಗೆ ಒಪ್ಪಿಸಲಾಯಿತು.

ಹಝ್ರತ್ ಅಬೂಬಕರ್(ರ)ರಿಗೆ ಹಾಮಿರ್ ಬಿನ್ ಫುಹೇರ ಎಂಬ ಓರ್ವ ನಿಷ್ಠಾವಂತ ಹಾಗೂ ಬುದ್ಧಿವಂತ ಗುಲಾಮನಿದ್ದನು. ಅವನು ತನ್ನ ಆಡುಗಳನ್ನು ಸೌರ್ ಗುಹೆಯ ಸುತ್ತಮುತ್ತ ಮೇಯಿಸಬೇಕು ಮತ್ತು ರಾತ್ರಿ ಸಮಯದಲ್ಲಿ ಹಾಲು ಕೊಡುವ ಆಡುಗಳ ತಾಜಾ ಹಾಲನ್ನು ಅವರಿಬ್ಬರಿಗೆ ಒದಗಿಸಿಕೊಡಬೇಕೆಂಬ ಡ್ಯೂಟಿ ಅವನಿಗೆ ಕೊಡಲಾಯಿತು. ಹಝ್ರತ್ ಅಲಿ(ರ)ರಿಗೆ ಒಪ್ಪಿಸಲಾದ ಡ್ಯೂಟಿ ಏನೆಂದರೆ, ಅವರು ರಾತ್ರಿ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಹಾಸಿಗೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಹಸಿರು ಅಥವಾ ಒಂದು ವರದಿ ಪ್ರಕಾರ ಕೆಂಪು ಬಣ್ಣದ ಚಾದರವನ್ನು ಹೊದ್ದುಕೊಂಡು ನಿದ್ದೆ ಮಾಡಬೇಕು ಮತ್ತು ಹಝ್ರತ್ ಪೈಗಂಬರ್(ಸ)ರ ಬಳಿಯಲ್ಲಿ ಜನರು ಒಪ್ಪಿಸಿದ್ದ ವಸ್ತುಗಳನ್ನು ಮರಳಿಸಿ ಮೂರು ದಿನಗಳ ನಂತರ ಮದೀನಕ್ಕೆ ತಲುಪಬೇಕು.

ಹಿಜ್ರತ್ ಮಾಡಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಮನೆಯಿಂದ ಹೊರಟ ಸರಿಯಾದ ಸಮಯದ ಬಗ್ಗೆ ಅನೇಕ ವರದಿಗಳಿವೆ. ಹಝ್ರತ್ ಮಸೀಹ್ ಮೌಊದ್(ಅ)ರ ಪ್ರಕಾರ ಹಝ್ರತ್ ಪೈಗಂಬರ್(ಸ) ಬೆಳಿಗ್ಗಿನ ಸಮಯದಲ್ಲಿ ಮನೆಯಿಂದ ಹೊರಟಿದ್ದರು. ವಿರೋಧಿಗಳು ಹಝ್ರತ್ ಪೈಗಂಬರ್(ಸ)ರ ಮನೆಯನ್ನು ಸುತ್ತುವರೆದಿದ್ದರೂ ಕೂಡ ಯಾವನೂ ಹಝ್ರತ್ ಪೈಗಂಬರ್(ಸ)ರನ್ನು ನೋಡಿರಲಿಲ್ಲ. ಈ ಎಲ್ಲ ಸಂಶಯಗ್ರಸ್ತರ ಕಣ್ಣುಗಳಲ್ಲಿ ಅಲ್ಲಾಹನು ಪರದೆ ಹಾಕಿದನು ಮತ್ತು ಹಝ್ರತ್ ಪೈಗಂಬರ್(ಸ) ಅವರ ತಲೆಯ ಮೇಲೆ ಧೂಳು ಎಬ್ಬಿಸುತ್ತಾ ಅಲ್ಲಿಂದ ಹೊರಟು ಹೋದರು ಎಂಬುದಾಗಿ ಅಲ್ಲಾಹನು ಸೂರಃ ಯಾಸೀನ್‌ನಲ್ಲಿ ಪ್ರಸ್ತಾಪಿಸಿರುವನು. ಅದೇ ರೀತಿಯಲ್ಲಿ ಹಝ್ರತ್ ಪೈಗಂಬರ್(ಸ) ಮನೆಯಿಂದ ಹೊರಟ ನಂತರ ಯಾವ ಕಡೆಗೆ ಹೋದರು ಎಂಬುದರ ಬಗ್ಗೆ ಸಹ ಭಿನ್ನಾಭಿಪ್ರಾಯವಿದೆ. ಹೆಚ್ಚು ಸರಿಯಾದ ಮತ್ತು ಹೆಚ್ಚು ಸಾಧ್ಯತೆಯಿರುವ ಸಂಗತಿಯೇನೆಂದರೆ, ಅವರು ತನ್ನ ಮನೆಯಿಂದ ಹೊರಟು ನೇರವಾಗಿ ಹಝ್ರತ್ ಅಬೂಬಕರ್(ರ)ರ ಮನೆಗೆ ಹೋದರು ಮತ್ತು ಅಲ್ಲಿಂದ ಅವರ ಜೊತೆಗೆ ಸೌರ್ ಗುಹೆಗೆ ಹೊರಟರು. ಹಿಜ್ರತ್ ಯಾತ್ರೆಯ ವೇಳೆ ಯಾತ್ರಾ ಆವಶ್ಯಕತೆಗಳಿಗಾಗಿ ಹಝ್ರತ್ ಆಯಿಶ(ರ) ತನ್ನ ಸೂಕ್ಷ್ಮ ಬುದ್ಧಿವಂತಿಕೆಯಿಂದ ಇಬ್ಬರಿಗಾಗಿಯೂ ಕೆಲವು ಸಾಮಾನುಗಳನ್ನು ಒಂದು ಚೀಲದಲ್ಲಿ ಹಾಕಿದರು. ಚೀಲವನ್ನು ಕಟ್ಟಲಿಕ್ಕಾಗಿ ಹಝ್ರತ್ ಅಸ್ಮಾ(ರ) ತನ್ನ ಲುಂಗಿಯಿಂದ ಒಂದು ತುಂಡನ್ನು ಹರಿದು ಅದರಿಂದ ಚೀಲವನ್ನು ಕಟ್ಟಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಎಲೈ ಅಸ್ಮಾ, ಅಲ್ಲಾಹನು ನಿನಗೆ ಈ ಕಟ್ಟಿನ ಪ್ರತಿಫಲವಾಗಿ ಸ್ವರ್ಗದಲ್ಲಿ ಎರಡು ಕಟ್ಟುಗಳನ್ನು ದಯಪಾಲಿಸುವನು. ಅನಂತರ ಹಝ್ರತ್ ಅಸ್ಮಾ(ರ)ರ ಹೆಸರು ಧ್ಯಾತುನ್ನಿತಾಖ್ ಎಂದೇ ಆಯಿತು.

ಹಿಜ್ರತ್ ಯಾತ್ರೆಯಲ್ಲಿ ಹಝ್ರತ್ ಪೈಗಂಬರ್(ಸ) ಈ ವಚನಗಳನ್ನು ಉಚ್ಚರಿಸುತ್ತಾ ಇದ್ದರು: **ವಖುರ್‌ರಬ್ಬಿ ಅದ್‌ಖಿಲ್‌ನೀ ಮುದ್‌ಖಲ ಸಿದ್‌ಖಿನ್ ವ ಅಖ್‌ರಿಜ್‌ನೀ ಮುಖ್‌ರಜ ಸಿದ್‌ಖಿನ್ ವಜ್‌ಅಲ್ಲೀ ಮಿಲ್ಲದುನ್‌ಕ ಸುಲ್ತಾನನ್ನಸೀರಾ.** (ಬನೀ ಇಸ್ರಾಈಲ್: 81) ಎಂದರೆ, ಹೇಳು: 'ನನ್ನ ಪ್ರಭೂ, ನನ್ನ ಪ್ರವೇಶ ಸತ್ಯದೊಂದಿಗೆ ಆಗುವ ರೀತಿಯಲ್ಲಿ ನನ್ನನ್ನು ಪ್ರವೇಶಿಸು ಮತ್ತು ನನ್ನ ನಿರ್ಗಮನ ಸತ್ಯದೊಂದಿಗೆ ಆಗುವ ರೀತಿಯಲ್ಲಿ ನನ್ನನ್ನು ಹೊರಗೆ ಹೋಗುವಂತೆ ಮಾಡು ಹಾಗೂ ನಿನ್ನ ಕಡೆಯಿಂದ ನನಗಾಗಿ ಶಕ್ತಿಶಾಲಿ ಸಹಾಯಕನನ್ನು ದಯಪಾಲಿಸು.' ಶರಹ್ ಝುರ್‌ಖಾನಿಯಲ್ಲಿ ಒಂದು ದುಆದ ಪ್ರಸ್ತಾಪ ಸಹ ಲಭಿಸುತ್ತದೆ. ಕಅ್‌ಬ ಭವನದ ಹಿಂದಿನಿಂದ ಸಾಗುವಾಗ ಹಝ್ರತ್ ಪೈಗಂಬರ್(ಸ) ಮಕ್ಕದ ಕಡೆಗೆ ಮುಖ ಮಾಡಿ ಹೇಳಿದರು: ಎಲೈ ಮಕ್ಕಾ, ನೀನು ಅಲ್ಲಾಹನ ಭೂಮಿಯಲ್ಲಿ ನನಗೆ ಮತ್ತು ಅಲ್ಲಾಹನಿಗೆ ಅತ್ಯಂತ ಪ್ರಿಯವಾದ ಪ್ರದೇಶವಾಗಿರುವೆ. ನಿನ್ನ ನಿವಾಸಿಗಳು ನನ್ನನ್ನು ಒತ್ತಾಯಪೂರ್ವಕವಾಗಿ ಹೊರಗೆ ಹಾಕಿರದಿದ್ದರೆ, ನಾನು ಎಂದಿಗೂ ಇಲ್ಲಿಂದ ನಿರ್ಗಮಿಸುತ್ತಿರಲಿಲ್ಲ.

ಇಮಾಂ ಬೈಹಖಿ ಬರೆಯುತ್ತಾರೆ: ಸೌರ್ ಗುಹೆಯ ಯಾತ್ರೆಯಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ಸಂರಕ್ಷಿಸಲಿಕ್ಕಾಗಿ ಹಝ್ರತ್ ಅಬೂಬಕರ್(ರ) ಅವರ ಮುಂದೆ, ಹಿಂದೆ, ಬಲಗಡೆ ಎಡೆಗಡೆಯಾಗಿ ನಡೆಯುತ್ತಿದ್ದರು. ಹಝ್ರತ್ ಪೈಗಂಬರ್(ಸ) ಎಲ್ಲ ಕಡೆಯಿಂದಲೂ ಸುರಕ್ಷಿತವಾಗಿ ಮತ್ತು ಕ್ಷೇಮವಾಗಿ ಇರಲು ಹೀಗೆ ಮಾಡುತ್ತಿದ್ದರು. ಒಂದು ವರದಿಯ ಪ್ರಕಾರ ಈ ಪರ್ವತ ಮಾರ್ಗದ ಯಾತ್ರೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಕಾಲುಗಳು ಗಾಯಗೊಂಡಿದ್ದುವು. ಸೌರ್ ಗುಹೆಯನ್ನು ತಲುಪಿದಾಗ, ಅಪಾಯದ ಬಗ್ಗೆ ಮುಂಜಾಗ್ರತೆಯ ದೃಷ್ಟಿಯಿಂದ ಹಝ್ರತ್ ಅಬೂಬಕರ್(ರ) ಮೊದಲು ಸ್ವತಃ ಅದರೊಳಗೆ ಪ್ರವೇಶಿಸಿದರು ಮತ್ತು ಗುಹೆಯನ್ನು ಸ್ವಚ್ಛಗೊಳಿಸಿದರು. ಅನಂತರ ಹಝ್ರತ್ ಪೈಗಂಬರ್(ಸ)ರೊಡನೆ ಒಳಗೆ ಬರಲು ಹೇಳಿದರು. ಹಝ್ರತ್ ಅಬೂಬಕರ್(ರ)ರ ಮಡಿಲಲ್ಲಿ ತಲೆಯಿರಿಸಿ

ಹಝ್ರತ್ ಪೈಗಂಬರ್(ಸ) ಮಲಗಿದರು. ಹಝ್ರತ್ ಅಬೂಬಕರ್(ರ) ತನ್ನೊಂದು ಪಾದವನ್ನು ಒಂದು ತೂತದಲ್ಲಿ ಇಟ್ಟುಕೊಂಡರು. ಅಲ್ಲಿಂದ ಕೆಲವೊಮ್ಮೆ ಚೇಳು ಅಥವಾ ಹಾವು ಕಚ್ಚುತ್ತಿತ್ತು. ಆದರೆ ಹಝ್ರತ್ ಅಬೂಬಕರ್(ರ) ಅಲ್ಪವೂ ಅಲುಗಾಡಲಿಲ್ಲ. ಹಝ್ರತ್ ಪೈಗಂಬರ್(ಸ) ಎಚ್ಚರಗೊಂಡು ಕಣ್ಣು ತೆರೆದಾಗ ಹಝ್ರತ್ ಅಬೂಬಕರ್(ರ)ರ ಮುಖದ ಬಣ್ಣ ಬದಲಾಗಿರುವುದನ್ನು ಕಂಡು ಏನಾಯಿತು ಎಂದು ಕೇಳಿದರು. ತನ್ನ ಅನುಗ್ರಹೀತ ಲಾಲಾರಸವನ್ನು ಅಲ್ಲಿಗೆ ಸವರಿದರು. ಅದರ ನಂತರ ಅವರ ಪಾದವು ಏನೂ ಆಗಿಲ್ಲವೆಂಬಂತೆ ಗುಣಮುಖವಾಯಿತು.

ಹಝ್ರತ್ ಪೈಗಂಬರ್(ಸ)ರ ಹಾಸಿಗೆಯಲ್ಲಿ ಹಝ್ರತ್ ಅಲಿ(ರ) ಮಲಗಿರುವುದಾಗಿ ಮಕ್ಕದ ಖುರೈಶಿಗಳಿಗೆ ಗೊತ್ತಾದಾಗ ಅವರು ಹಝ್ರತ್ ಅಲಿ(ರ)ರನ್ನು ಗದರಿಸಿ ಬಿಟ್ಟುಬಿಟ್ಟರು. ಅನಂತರ ಹಝ್ರತ್ ಅಸ್ಮಾ(ರ)ರೊಡನೆ ಇದರ ಬಗ್ಗೆ ಪ್ರಶ್ನಿಸುವ ವೇಳೆ ಅಬೂಜಹಲ್ ಅಸ್ಮಾರ ಕೆನ್ನೆಗೆ ಹೊಡೆದರು. ಅದರಿಂದ ಅವರ ಕಿವಿಯೋಲೆ ತುಂಡಾಯಿತು. ಕೊನೆಗೆ ಮಕ್ಕದ ಸರದಾರ ಉಮಯ್ಯ ಬಿನ್ ಖ಼ಲ್ಫ್ ಸ್ವತಃ ಒಬ್ಬ ನುರಿತ ಪತ್ತೆಗಾರನನ್ನು ಜೊತೆ ಸೇರಿಸಿ ತನ್ನ ಸಂಗಡಿಗರ ಸಮೇತ ಸೌರ್ ಗುಹೆಯ ಪ್ರವೇಶದ ತನಕ ತಲುಪಿದರು. ಹಝ್ರತ್ ಅಬೂಬಕರ್(ರ) ಹೇಳುತ್ತಾರೆ: ನಾನು ಅವರ ಕಾಲುಗಳನ್ನು ಕಾಣುತ್ತಿದ್ದೆನು. ಅವರಲ್ಲಿ ಒಬ್ಬನಾದರೂ ಇಣುಕಿ ನೋಡಿದ್ದರೆ ನಾವು ಹಿಡಿಯಲ್ಪಡುತ್ತಿದ್ದೆವು. ಆದರೆ ಅಪಾಯದ ಆ ಕ್ಷಣದಲ್ಲಿ ಅದ್ಭುತವಾದ ದೈವಿಕ ಶಕ್ತಿಯಿಂದ ಒಂದು ಜೇಡವು ಗುಹೆಯ ಪ್ರವೇಶದ್ವಾರದಲ್ಲಿ ಬಲೆಯನ್ನು ಹೆಣೆದಿತ್ತು ಮತ್ತು ಪರಿವಾಳಗಳ ಒಂದು ಜೋಡಿ ಗೂಡು ಕಟ್ಟಿ ಮೊಟ್ಟೆಗಳನ್ನು ಹಾಕಿತ್ತು.

ಇದರ ಪ್ರಸ್ತಾಪ ಮುಂದುವರೆಯುವುದು. ಇನ್ಶಾ ಅಲ್ಲಾಹ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 24-12-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon